# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ , ಬಿ. ಹೆಚ್. ರಸ್ತೆ , ತುಮಕೂರು - 572 103

ಸಂಖ್ಯೆ:ತು.ವಿ:ಅ.ವಿ:ಅ.ಉ.ನೇ:2026-27/1385/

ದಿನಾಂಕ:23.09.2026

## : ಅಧಿಸೂಚನೆ :

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2026–27 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ. 55 ಅಂಕಗಳು (ಸಾಮಾನ್ಯ ಮತ್ತು ಇತರೆ ವರ್ಗದ ಅಭ್ಯರ್ಥಿಗಳು) ಹಾಗೂ ಶೇ. 50 ಅಂಕಗಳೊಂದಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು) NET/KSET/Ph.D ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಗೆ **ದಿನಾಂಕ:28.09.2026** ರ **ಸೋಮವಾರದಂದು ಮಾನ್ಯ ಕುಲಪತಿಗಳ ಕೊಠಡಿ, ತುಮಕೂರು ವಿಶ್ವವಿದ್ಯಾನಿಲಯ, ಬಿ. ಎಚ್. ರಸ್ತೆ, ತುಮಕೂರು** ಇಲ್ಲಿ **ನೇರ ಸಂದರ್ಶನ (Walk-in Interview)** ಏರ್ಪಡಿಸಲಾಗಿದೆ.

| ಕ್ರಮ ಸಂಖ್ಯೆ | ಸ್ನಾತಕೋತ್ತರ ವಿಭಾಗ | ಹುದ್ದೆಗಳ ಸಂಖ್ಯೆ | ಸಂದರ್ಶನದ ಸಮಯ |
|---|---|---|---|
| 01 | ಸಮಾಜಶಾಸ್ತ್ರ | 01 (ಒಂದು) [ಅರೆಕಾಲಿಕ] | ಮಧ್ಯಾಹ್ನ 03.00 ಗಂಟೆ |

ಯು.ಜಿ.ಸಿ. ನಿಯಮಾನುಸಾರ ಅರ್ಹರಿರುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳು (ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ) ಹಾಗೂ ನಿಗಧಿತ ಶುಲ್ಕದ ಡಿ.ಡಿ. ಯೊಂದಿಗೆ **ದಿನಾಂಕ:28.09.2026** ರ **ಸೋಮವಾರದಂದು ಮಧ್ಯಾಹ್ನ 12.00 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ವಿಭಾಗದಲ್ಲಿ** ದಾಖಲಾತಿಗಳ ಪರಿಶೀಲನೆಗಾಗಿ ಹಾಜರಾಗತಕ್ಕದ್ದು.

**ಅರ್ಜಿ ಶುಲ್ಕದ ವಿವರ :** ಅತಿಥಿ ಉಪನ್ಯಾಸಕರ ಹುದ್ದೆ ಬಯಸಿ ನೇರ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ **"ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು"** ಇವರ ಹೆಸರಿನಲ್ಲಿ ಈ ಕೆಳಕಂಡ ಕೋಷ್ಟಕದಲ್ಲಿನ ಅನ್ವಯಿಸುವ ಶುಲ್ಕದ ಡಿ.ಡಿ. ಪಡೆದು ಹಾಜರಾಗತಕ್ಕದ್ದು. ಮುಂದುವರೆದು ಯಾವುದೇ ಕಾರಣಕ್ಕೂ ಶುಲ್ಕ ಮರುಪಾವತಿಗೆ ಅವಕಾಶವಿರುವುದಿಲ್ಲ.

| ಸಾಮಾನ್ಯ ವರ್ಗ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 | ವಿಕಲಚೇತನ ಅಭ್ಯರ್ಥಿಗಳು |
|---|---|---|
| ರೂ. 500-00/- (ಐದು ನೂರು ರೂಪಾಯಿಗಳು ಮಾತ್ರ) | ರೂ. 250-00/- (ಎರಡು ನೂರ ಐವತ್ತು ರೂಪಾಯಿಗಳು ಮಾತ್ರ) | ಯಾವುದೇ ಶುಲ್ಕ ಇರುವುದಿಲ್ಲ. |
| **(Non-Refundable Amount)** | | |

ಆದೇಶದ ಮೇರೆಗೆ

23-09-2026

ಉಪಕುಲಸಚಿವರು

ಉಪಕುಲಸಚಿವರು

ಅಭಿವೃದ್ಧಿ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು